ಒ ಎಸ್ 24/2022 ಪಿ.ಡಬ್ಲ್ಯೂ:1

ಇಂದು ದಿಃ 09.12.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಕಳೆದ 10 ವರ್ಷಗಳಿಂದ ಪ್ರತಿವಾದಿ ಪರಿಚಯ. ಆ ಮೊದಲು ಪ್ರತಿವಾದಿಗಳು ನನ್ನ ಅಳಿಯನ ಕಡೆಯಿಂದ ಪರಿಚಯ. ಕರಾರು ಪತ್ರ ಬರೆದುಕೊಟ್ಟಿದ್ದರು ಎನ್ನುವ ಸ್ಥಳವು ನಿವೇಶನ ಎಂದರೆ ಸರಿ. ಸೈಟ್ ಗಳಿಗೆ ಸಮಾನ್ಯವಾಗಿ ಚದರ ಅಡಿಗಳ ಆಧಾರದಲ್ಲಿ ಬೆಲೆ ಕಟ್ಟುತ್ತಾರೆ ಎಂದರೆ ಸರಿ. ನಾವು ಖರೀದಿಸಲು ಕರಾರು ಮಾಡಿಕೊಂಡಿರುವ 2 ಗುಂಟೆ ಜಮೀನಿಗೆ ಸುಮಾರು 60 ಲಕ್ಷ ಬೆಲೆ ಬಾಳುತ್ತದೆ ಎಂದರೆ 5-6 ಲಕ್ಷ ಬೆಲೆ ಬಾಳುತ್ತದೆ ಎನ್ನುತ್ತಾರೆ. 60 ಲಕ್ಷ ಜಮೀನಿಗೆ ಬೆಲೆ ಇದ್ದರೂ ಸಹ 5-6 ಲಕ್ಷ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಬಸಹಳ್ಳಿ ಗ್ರಾಮದವನು. ದಾವಾ ಆಸ್ತಿ ಜಾಗ ಮತ್ತು ನಮ್ಮ ಊರಿಗೆ 20-25 ಕಿ. ಮಿ ದೂರ ಇದೆ. ದಾವಾ ಆಸ್ತಿಯ ಊರಿನಲ್ಲಿ ನನಗೇನು ವ್ಯವಹಾರ ಇಲ್ಲ ಮತ್ತು ಅಕ್ಕ ಪಕ್ಕ ಜಮೀನು ಇಲ್ಲ. ನನ್ನ ಅಳಿಯನ ಹೆಸರು ಮಹದೇವಸ್ವಾಮಿ. ನನ್ನ ಅಳಿಯ ದೂರ ಗ್ರಾಮದವರು. ದೂರ ಗ್ರಾಮದಲ್ಲಿ ನನಗೆ ಬೇಕಾದವರಿಗೆ ಸಾಲ ಕೊಡು ವ್ಯವಹಾರ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗಂಡನ ಹೆಸರು ಖರೀಂ ಸಾಬ್. ಪ್ರತಿವಾದಿಯ ಗಂಡ ನನ್ನ ಅಳಿಯನ ಬಳಿ ಸಾಲ ಕೇಳಲು ಬಂದಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ನನ್ನ ಅಳಿಯನ ಬಳಿ ರೂ 1 ಲಕ್ಷ 20 ಸಾವಿರ ಕೇಳಲಾಗಿ ಅವರು ನನ್ನ ಮಾವನ ಬಳಿ ಕೇಳಿ ಕೊಡಿಸುತ್ತೇನೆ ಎಂದರೆ ಸರಿಯಲ್ಲ. ನಂತರ ಖರೀಂ ಸಾಬ್ ಗೆ ನನ್ನ ಅಳಿಯನ ಮೂಲಕ ನಾನು ರೂ 1 ಲಕ್ಷ 20 ಸಾವಿರ ಹಣ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಹಣದ ಭದ್ರತೆಗಾಗಿ ಪ್ರತಿವಾದಿ ಹೆಸರಿನಲ್ಲಿರುವ ಖಾಲಿ ನಿವೇಶನ ಬರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ಭದ್ರತೆಗೆ ಬರೆದುಕೊಟ್ಟ ದಾಖಲೆಯನ್ನು ಕ್ರಯದ ಕರಾರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕರಾರು ಪತ್ರದಲ್ಲಿ 6 ತಿಂಗಳು ಕ್ರಯ ಪತ್ರ ಬರೆಯಲು ಕಾಲ ನಿಗದಿ ಪಡಿಸಲಾಗಿತ್ತು. ಕ್ರಯದ ಕರಾರು ಪತ್ರ ಮಾಡಿಸಿಕೊಂಡಿದ್ದೆ ಎನ್ನುವ ಸಮಯದಲ್ಲಿ ದಾವಾ ಆಸ್ತಿಯ ಆರ್ ಟಿ ಸಿ ಪ್ರತಿವಾದಿಯ ಹೆಸರಿನಲ್ಲೇ ಇತ್ತು. ಕರಾರು ಆಯಿತು ಎಂದು ಹೇಳುವ ಸಮಯದಲ್ಲಿ ದಾವಾ ಆಸ್ತಿಗಳು ಪ್ರತಿವಾದಿ ಹೆಸರಿನಲ್ಲಿದ್ದ ಕಾರಣ ಬರೆಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಪ್ರತಿವಾದಿಯು ಮಾಡಿಕೊಟ್ಟಿಲ್ಲ ಎನ್ನುತ್ತಾರೆ. ಪ್ರತಿವಾದಿಯು ಅವರ ಆಸ್ತಿ ಮಾರಾಟ ಮಾಡುತ್ತೇನೆ ಎಂದು ಯಾವುದೇ ಕರಾರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಕರಾರು ಆಯಿತು ಎಂದು ಹೇಳುವ ದಾಖಲೆಯನ್ನು

ಪ್ರತಿವಾದಿಗೆ ಓದಿ ಹೇಳಿರುವುದಿಲ್ಲ. ಪ್ರತಿವಾದಿ ಬರದ ಕಾರಣ 6 ತಿಂಗಳ ಒಳಗೆ ಕರಾರು ಮಾಡಿಕೊಳ್ಳಲು ಆಗಿರುವುದಿಲ್ಲ. 6 ತಿಂಗಳ ಒಳಗಡೆ ಪ್ರತಿವಾದಿಗೆ ನೊಟೀಸ್ ಕೊಟ್ಟು ಕ್ರಯ ಪತ್ರ ಬರೆದುಕೊಡಿ ಎಂದು ನಾನು ನೊಟೀಸ್ ಕೊಟ್ಟಿದ್ದೆ. 6 ತಿಂಗಳ ಒಳಗಡೆ ನೊಟೀಸ್ ಕೊಟ್ಟಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿ ಬರೆದುಕೊಟ್ಟ ದಾಖಲೆಯು ಕರಾರು ಪತ್ರವಾಗದ ಕಾರಣ ನಿಗದಿತ ಅವಧಿಯಲ್ಲಿ ಕ್ರಯ ಪತ್ರ ಬರೆದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ.

ರೂ.6,10,000/- ಸ್ವತ್ತಿನ ಮೊತ್ತ ಎಂದು ನಿಗದಿಪಡಿಸಿ ರೂ 5 ಲಕ್ಷ ಮುಂಗಡ ಕೊಟ್ಟಿದ್ದೆ ಎನ್ನುವುದು ಸುಳು ಎಂದರೆ ಸರಿಯಲ್ಲ. ಪ್ರತಿವಾದಿಗೆ ಯಾವುದೇ ಮಾಹಿತಿ ನೀಡದೆ ನಂತರ ಕರಾರು ಮುಂದೂಡಿಕೆ ಪತ್ರ ಬರೆದುಕೊಂಡಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಕನ್ನಡ ಓದಲು ಬರೆಯಲು ಬರದ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು ಮುಂದೂಡಿಕೆ ಕರಾರು ಪತ್ರ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಾಖಲೆಗಳು ಅಂದರೆ ನಕಾಶೆ ಪಡೆಯಲು ನಾವು ಇಬ್ಬರೂ ಸೇರಿ ಸಹಿ ಹಾಕಿ ಅರ್ಜಿಯನ್ನು ತಾಲ್ಲೂಕು ಕಛೇರಿಗೆ ಕೊಟ್ಟಿಲ್ಲ. ನನ್ನ ಬಳಿ ರೂ 6 ಲಕ್ಷ ಹಣ ಇದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ . ನನ್ನ ಬಳಿ 6 ಲಕ್ಷ ಹಣ ಇರಲಿಲ್ಲ ಹಾಗೂ ನಾನು ಕ್ರಯದ ಕರಾರನ್ನು ಪ್ರತಿವಾದಿ ಜೊತೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಲ ಭದ್ರತೆಗೆ ಪಡೆದುಕೊಂಡ ದಾಖಲೆಯನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿಸಲು ನನಗೆ ಇಚ್ಛೆ ಇರಲಿಲ್ಲ ಮತ್ತು ಅಷ್ಟು ಹಣ ನನ್ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬರೆಸಿಕೊಂಡಿದ್ದೆ ಎಂದು ಹೇಳಲಾದ ಕ್ರಯದ ಕರಾರು ಪತ್ರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.